# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 56 |
| ಸದಸ್ಯರ ಹೆಸರು | ಶ್ರೀ ಮಧು .ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09-12-2024 |
| ಉತ್ತರಿಸುವವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ರಾಜ್ಯದಲ್ಲಿ ನವಜಾತ ಶಿಶುಗಳ ಮರಣ ಮತ್ತು ತಾಯಿ ಮರಣದ ಅನುಪಾತ (ದರ) ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ನವ ಜಾತ ಶಿಶುಗಳ ಮರಣದ ಅನುಪಾತ (ದರ) ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ರಲ್ಲಿ** ಅಡಕವಿರಿಸಿದೆ.<br><br>ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ತಾಯಿ ಮರಣ ಪ್ರಮಾಣ 64 ಇರುತ್ತದೆ.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2 ರಲ್ಲಿ** ಲಗತ್ತಿಸಿದೆ.<br><br>ಭಾರತ ಸರ್ಕಾರದ SRS ಮೂಲದ ಪ್ರಕಾರ 2018-20 ಸಾಲಿಗೆ ಕರ್ನಾಟಕ ರಾಜ್ಯದಲ್ಲಿ ತಾಯಿ ಮರಣ ಪ್ರಮಾಣ 69 ಇದೆ. |
| ಆ | ಇದು ರಾಷ್ಟ್ರೀಯ ಸರಾಸರಿಗಿಂತ ಎಷ್ಟಿದೆ: ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಶ್ರೇಯಾಂಕದಲ್ಲಿ ಎಷ್ಟನೇ ಸ್ಥಾನದಲ್ಲಿದೆ: | ಕರ್ನಾಟಕ ರಾಜ್ಯದ ಸರಾಸರಿ ನವಜಾತ ಶಿಶು ಮರಣ ದರವು 14 (ಪ್ರತಿ 1000 ಜೀವಂತ ಜನನಗಳಿಗೆ) ಇದ್ದು ಭಾರತ ದೇಶದ ದರವು 20 ಇರುತ್ತದೆ. ದೇಶದ ಇತರೆ ರಾಜ್ಯಗಳಿಗೆ ಹೋಲಿಸಲಾಗಿ, ಕರ್ನಾಟಕವು 8ನೇ ಶ್ರೇಯಾಂಕದಲ್ಲಿದ್ದು ಪ್ರಗತಿಯತ್ತ ಸಾಗುತ್ತಿದೆ.<br><br>**(ದತ್ತಾಂಶ Sample Registration System (SRS) ಸಮೀಕ್ಷೆ 2020)**<br><br>ರಾಷ್ಟ್ರೀಯ ಸರಾಸರಿ ತಾಯಿ ಮರಣ ದರ 97, ಕರ್ನಾಟಕ ರಾಜ್ಯ 69. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಶ್ರೇಯಾಂಕದಲ್ಲಿ 8ನೇ ಸ್ಥಾನದಲ್ಲಿದೆ. ಮಾಹಿತಿಯನ್ನು **ಅನುಬಂಧ-3 ರಲ್ಲಿ ಲಗತ್ತಿಸಿದೆ.** |
| ಇ | ರಾಜ್ಯದಲ್ಲಿರುವ ತಾಯಿ ಮತ್ತು ಆಸ್ಪತ್ರೆಗಳ ಸಂಖ್ಯೆ ಎಷ್ಟು: ರಾಜ್ಯದಲ್ಲಿ ಹೊಸದಾಗಿ ಎಂ.ಸಿ.ಹೆಚ್. ಆಸ್ಪತ್ರೆಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆಯೇ: ಇದ್ದಲ್ಲಿ (ವಿವರ ನೀಡುವುದು) | ರಾಜ್ಯದಲ್ಲಿ ಇಲ್ಲಿಯವರೆಗೂ 88 ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳು ಮಂಜೂರಾಗಿರುತ್ತದೆ. ಇವುಗಳಲ್ಲಿ 62 ಕಾರ್ಯಗತಗೊಳಿಸಲಾಗಿದೆ. ಉಳಿದ ಆಸ್ಪತ್ರೆಗಳು ನಿರ್ಮಾಣ ಹಂತದಲ್ಲಿರುತ್ತದೆ.<br><br>ಪ್ರಸ್ತುತ ರಾಜ್ಯದಲ್ಲಿ ಅವಶ್ಯಕತೆ ಅನುಗುಣವಾಗಿ ಹಾಗೂ ಭಾರತ ಸರ್ಕಾರದ ಮಾರ್ಗಸೂಚಿ ಅನ್ವಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುತ್ತಿದೆ. |

<table>
<tr>
<td>ಈ</td>
<td>ನವಜಾತ ಶಿಶುಗಳ ಮರಣ ಮತ್ತು ತಾಯಿ ಮರಣ ದರವನ್ನು ಕಡಿಮೆಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು: ಹಾಗೂ ನವಜಾತ ಶಿಶುಗಳ ಮರಣ ಮತ್ತು ತಾಯಿ ಮರಣವನ್ನು ಹೇಗೆ ವ್ಯಾಖ್ಯಾನಿಸಲಾಗುತ್ತದೆ: (ವಿವರ ನೀಡುವುದು)</td>
<td>ನವಜಾತ ಶಿಶುಗಳ ಮರಣ ಪ್ರಮಾಣವನ್ನು ಕಡಿಮೆಗೊಳಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಅನುಬಂಧ-4 ರಲ್ಲಿ ಅಡಕವಿರಿಸಿದೆ.<br><br>ನವಜಾತ ಶಿಶುಗಳ ಮರಣ ದರವನ್ನು ಪ್ರತಿ 1000 ಜೀವಂತ ಜನನಗಳಿಗೆ ವ್ಯಾಖ್ಯಾನಿಸಲಾಗುತ್ತದೆ.<br>
<table>
<tr><td rowspan="2">ನವಜಾತ ಶಿಶು ಮರಣ ದರ</td><td rowspan="2">=</td><td>ನಿರ್ಧಿಷ್ಟ ಅವಧಿಯಲ್ಲಿ ಸಂಬವಿಸಿದ ಒಟ್ಟು ನವಜಾತ ಶಿಶು ಮರಣಗಳು</td><td rowspan="2">X1000</td></tr>
<tr><td>ಅದೇ ಅವಧಿಯ ಒಟ್ಟು ಜೀವಂತ ಜನನಗಳು</td></tr>
</table>
ತಾಯಂದಿರ ಮರಣ ಪ್ರಮಾಣವನ್ನು ತಡೆಗಟ್ಟಲು ಸರ್ಕಾರ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ. ಮಾಹಿತಿಯನ್ನು ಅನುಬಂಧ-5 ರಲ್ಲಿ ಲಗತ್ತಿಸಿದೆ.<br><br>ತಾಯಿ ಮರಣ ಪ್ರಮಾಣವನ್ನು ಪ್ರತಿ 1 ಲಕ್ಷ ಜೀವಂತ ಜನನಗಳಿಗೆ ವ್ಯಾಖ್ಯಾನಿಸಲಾಗುತ್ತದೆ.<br>
<table>
<tr><td rowspan="2">ತಾಯಿ ಮರಣ = ಪ್ರಮಾಣ</td><td>ನಿರ್ಧಿಷ್ಟ ಅವಧಿಯಲ್ಲಿ ಸಂಬವಿಸಿದ ಒಟ್ಟು ತಾಯಿ ಮರಣಗಳು</td><td rowspan="2">x 1,00,000</td></tr>
<tr><td>ಅದೇ ಅವಧಿಯ ಒಟ್ಟು ಜೀವಂತ ಜನನಗಳು</td></tr>
</table>
</td>
</tr>
<tr>
<td>ಉ</td>
<td>ಮಂಡ್ಯ ತಾಲ್ಲೂಕು ಬಿ.ಹೊಸೂರು ಕಾಲೋನಿಯಲ್ಲಿ ತಾಯಿ ಮಕ್ಕಳ ಆಸ್ಪತ್ರೆಯನ್ನು ಯಾವ ಯೋಜನೆಯಡಿ ನಿರ್ಮಿಸಲಾಗುತ್ತಿದೆ: ಇದರ ಯೋಜನಾ ವೆಚ್ಚ ಮತ್ತು ಹಾಸಿಗೆ ಸಾಮರ್ಥ್ಯ ಎಷ್ಟು: ನಿರ್ಮಾಣ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ:</td>
<td>ಮಂಡ್ಯ ತಾಲ್ಲೂಕು ಬಿ.ಹೊಸೂರು ಕಾಲೋನಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ಅನುದಾನದಲ್ಲಿ ನಿರ್ಮಿಸಲಾಗುತ್ತಿದೆ. ಹಾಸಿಗೆ ಸಾಮರ್ಥ್ಯ 100.
<ul>
<li>ಮಂಡ್ಯ ತಾಲ್ಲೂಕು ಬಿ.ಹೊಸೂರು ಕಾಲೋನಿಯಲ್ಲಿ ತಾಯಿ ಮಕ್ಕಳ ಆಸ್ಪತ್ರೆಯನ್ನು ಎನ್.ಹೆಚ್.ಎಂ. ಯೋಜನೆಯಡಿ 2020-21 ರಲ್ಲಿ ರೂ.2000.00 ಲಕ್ಷಗಳು ಅನುಮೋದನೆಯಾಗಿದ್ದು, ಹಾಗೂ 2023-24 ರಲ್ಲಿ ಲೆಕ್ಕಶೀರ್ಷಿಕೆ: 4210-01-110-1-01-386 ಯೋಜನೆಯಡಿ ಕಾಮಗಾರಿಗೆ ಹೆಚ್ಚುವರಿ ಮೊತ್ತ ರೂ.361.00 ಲಕ್ಷಗಳು ಅನುಮೋದನೆಯಾಗಿದ್ದು, ಒಟ್ಟು ರೂ.2361.00 ಲಕ್ಷಗಳ ಮೊತ್ತದಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗಿದೆ.</li>
<li>ಸದರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯು ಒಟ್ಟು 100 ಹಾಸಿಗೆಗಳ ಸಾಮರ್ಥ್ಯವನ್ನು ಹೊಂದಿರುತ್ತದೆ.</li>
<li>ಪ್ರಸ್ತುತ ರೂ.2361.00 ಲಕ್ಷಗಳು ಕಾಮಗಾರಿಯು ಪೂರ್ಣಗೊಂಡಿರುತ್ತದೆ.</li>
</ul>
</td>
</tr>
</table>

| | | |
|---|---|---|
| ಊ | ಸದರಿ ಆಸ್ಪತ್ರೆಯ ನಿರ್ಮಾಣದಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳಾವುವು: ಉಪಕರಣಗಳನ್ನು ಅಳವಡಿಸುವ ಕಾರ್ಯ ನಡೆದಿದೆಯೇ: ಆಸ್ಪತ್ರೆಯು ಎಂದಿನಿಂದ ಕಾರ್ಯಾರಂಭ ಮಾಡಲಿದೆ: (ಸಂಪೂರ್ಣ ವಿವರ ನೀಡುವುದು) | ಮಂಡ್ಯ ತಾಲ್ಲೂಕು ಬಿ.ಹೊಸೂರು ಕಾಲೋನಿಯಲ್ಲಿ ತಾಯಿ ಮಕ್ಕಳ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭಿಸುವಂತೆ ಮಾಡಲು ಈ ಕೆಳಕಂಡ ಬಾಕಿ ಉಳಿದಿರುವ ಕಾಮಗಾರಿಗಳನ್ನು 2ನೇ ಹಂತದಲ್ಲಿ ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ. ಬಾಕಿ ಉಳಿದಿರುವ ಕಾಮಗಾರಿಗಳು ಕೆಳಗಿನಂತಿವೆ.<br>**1. OT (02 No), Manifold Room & MGPLS System (50 Bed).**<br>**2. STP Machineries (75 Kld), Water Treatment Plant & ETP Machineries (5 Kld).**<br>**3. RO Plant, Solar Water Heater, Split AC System, CCTV System & Telephone & Networking System.**<br>**4. Compound Wall (Hospital & Quarters).**<br>**5. RCC Drain, Interlock Pavers Road (Extended), Cement Concrete Road.**<br>**6. Fire Fighting Works, Old Borewell Installation.**<br>**7. Approach Bituminous Road & Approach Drain.**<br><br>• ಎರಡನೇ ಹಂತದಲ್ಲಿ ಬಾಕಿ ಉಳಿದಿರುವ ಕಾಮಗಾರಿಗೆ 2024-25ನೇ ಸಾಲಿನ ರಾಜ್ಯ ವಲಯದ ಲೆಕ್ಕಶೀರ್ಷಿಕೆ: 4210-01-110-1-01-386 ರಡಿಯಲ್ಲಿ ರೂ.800.00 ಲಕ್ಷಗಳ ಅಂದಾಜು ಮೊತ್ತವು ಕ್ರಿಯಾ ಯೋಜನೆಯಲ್ಲಿಅನುಮೋದನೆಯಾಗಿದ್ದು, ಅಂದಾಜು ಪಟ್ಟಿಯನ್ನು ಅನುಮೋದನೆ ಕೋರಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಉಪಕರಣಗಳನ್ನು ನೀಡಲಾಗುವುದು.<br><br>ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಟೆಂಡರ್ ಆಹ್ವಾನಿಸಿ, ಕಾಮಗಾರಿಯನ್ನು 6 ತಿಂಗಳುಗಳೊಳಗೆ ಪೂರ್ಣಗೊಳಿಸಿ, ನಂತರ ಕಾರ್ಯಾರಂಭ ಮಾಡಬಹುದಾಗಿರುತ್ತದೆ. |
| ಋ | ಯಾವಾಗ ಸದರಿ ಆಸ್ಪತ್ರೆಯಲ್ಲಿ ಹೆರಿಗೆ ವೈದ್ಯಕೀಯ ತುರ್ತು ಸ್ಥಿತಿಗಳನ್ನು ನಿಭಾಯಿಸುವ ದೃಷ್ಟಿಯಿಂದ ಯಾವ ಯಾವ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ?: (ಸಂಪೂರ್ಣ ವಿವರ ನೀಡುವುದು) | ಸದರಿ ಆಸ್ಪತ್ರೆಯ ಕಟ್ಟಡ ಕಾಮಗಾರಿ ಪೂರ್ಣಗೊಂಡು ಹಸ್ತಾಂತರಗೊಂಡ ನಂತರ ಪೂರ್ಣ ಪ್ರಮಾಣದಲ್ಲಿ ಕಾರ್ಯರಂಭ ಮಾಡಲಾಗುವುದು.<br><br>ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೆಳಕಂಡ ಸೇವೆಗಳು ನೀಡಲು ಉದ್ದೇಶಿಸಲಾಗಿದೆ.<br><br>ಮಾಹಿತಿಯನ್ನು **ಅನುಬಂಧ-6 ರಲ್ಲಿ** ಲಗತಿಸಿದೆ. |

ಸಂಖ್ಯೆ: ಆಕುಕ 74 ಎಸ್ ಟಿ ಕ್ಯೂ 2024.

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

## ಅನುಬಂಧ-1

### ಕರ್ನಾಟಕ ರಾಜ್ಯದ ಜಿಲ್ಲಾವಾರು ನವಜಾತ ಶಿಶುಗಳ ಮರಣದ ಅನುಪಾತ (ದರ)

(ದತ್ತಾಂಶದ ಮೂಲ: ಹೆಚ್.ಎಂ.ಐ.ಎಸ್. ತಂತ್ರಾಂಶ)

| ಕ್ರಮ ಸಂಖ್ಯೆ | ಜಿಲ್ಲೆಗಳು | ನವಜಾತ ಶಿಶುಗಳ ಮರಣ ದರ 2023-24 |
|---|---|---|
| 1 | ಬಾಗಲಕೋಟೆ | 2 |
| 2 | ಬಳ್ಳಾರಿ | 14 |
| 3 | ಬೆಳಗಾವಿ | 2 |
| 4 | ಬೆಂಗಳೂರು ಗ್ರಾಮಾಂತರ | 1 |
| 5 | ಬೆಂಗಳೂರು ನಗರ | 8 |
| 6 | ಬೀದರ್ | 8 |
| 7 | ಚಾಮರಾಜನಗರ | 4 |
| 8 | ಚಿಕ್ಕಬಳ್ಳಾಪುರ | 2 |
| 9 | ಚಿಕ್ಕಮಗಳೂರು | 2 |
| 10 | ಚಿತ್ರದುರ್ಗ | 6 |
| 11 | ದಕ್ಷಿಣ ಕನ್ನಡ | 8 |
| 12 | ದಾವಣಗೆರೆ | 12 |
| 13 | ಧಾರವಾಡ | 9 |
| 14 | ಗದಗ | 5 |
| 15 | ಹಾಸನ | 12 |
| 16 | ಹಾವೇರಿ | 4 |
| 17 | ಕಲಬುರಗಿ | 9 |
| 18 | ಕೊಡಗು | 4 |
| 19 | ಕೋಲಾರ | 7 |
| 20 | ಕೊಪ್ಪಳ | 17 |
| 21 | ಮಂಡ್ಯ | 5 |
| 22 | ಮೈಸೂರು | 11 |
| 23 | ರಾಯಚೂರು | 10 |
| 24 | ರಾಮನಗರ | 2 |
| 25 | ಶಿವಮೊಗ್ಗ | 8 |
| 26 | ತುಮಕೂರು | 5 |
| 27 | ಉಡುಪಿ | 4 |
| 28 | ಉತ್ತರ ಕನ್ನಡ | 3 |
| 29 | ವಿಜಯನಗರ | 2 |
| 30 | ವಿಜಯಪುರ | 2 |
| 31 | ಯಾದಗಿರಿ | 4 |
|  | **ಕರ್ನಾಟಕ** | 7 |

ಉಪ ನಿರ್ದೇಶಕರು-ಮಕ್ಕಳ ಆರೋಗ್ಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಅನುಬಂಧ-2 ಅನುಬಂಧ-2

ಅನುಬಂಧ-2 (ಪ್ರಶ್ನೆ ಸಂಖ್ಯೆ-56)


## ಜಿಲ್ಲಾವಾರು ತಾಯಿ ಮರಣ ಪ್ರಮಾಣ 2021-22 ರಿಂದ 2023-24

| ಕ್ರಸ | ಜಿಲ್ಲೆ | ತಾಯಿ ಮರಣ ಸಂಖ್ಯೆ 2021-22 ರಿಂದ 2023-24 | ಸಜೀವ ಜನನ ಸಂಖ್ಯೆ 2021-22 ರಿಂದ 2023-24 | ತಾಯಿ ಮರಣ ಪ್ರಮಾಣ |
|---|---|---|---|---|
| 1 | ಚಿಕ್ಕಬಳ್ಳಾಪುರ | 75 | 47182 | 159 |
| 2 | ಧಾರವಾಡ | 124 | 95704 | 130 |
| 3 | ಹಾವೇರಿ | 62 | 56794 | 109 |
| 4 | ಬೆಂಗಳೂರು ಗ್ರಾ. | 30 | 28618 | 105 |
| 5 | ತುಮಕೂರು | 94 | 92592 | 102 |
| 6 | ರಾಮನಗರ | 27 | 28729 | 94 |
| 7 | ಕಲಬುರಗಿ | 130 | 138758 | 94 |
| 8 | ವಿಜಯನಗರ | 32 | 34440 | 93 |
| 9 | ಹಾಸನ | 51 | 62149 | 82 |
| 10 | ರಾಯಚೂರು | 90 | 117718 | 76 |
| 11 | ಚಾಮರಾಜನಗರ | 20 | 27091 | 74 |
| 12 | ಯಾದಗಿರಿ | 49 | 68409 | 72 |
| 13 | ಬೆಳಗಾವಿ | 147 | 209921 | 70 |
| 14 | ಬೀದರ್ | 60 | 86679 | 69 |
| 15 | ಕೋಲಾರ | 37 | 57911 | 64 |
| 16 | ಮೈಸೂರು | 69 | 110287 | 63 |
| 17 | ಗದಗ | 29 | 46861 | 62 |
| 18 | ಬಳ್ಳಾರಿ | 64 | 103809 | 62 |
| 19 | ಚಿತ್ರದುರ್ಗ | 35 | 59925 | 58 |
| 20 | ಕೊಡಗು | 11 | 20141 | 55 |
| 21 | ಶಿವಮೊಗ್ಗ | 43 | 81203 | 53 |
| 22 | ಕೊಪ್ಪಳ | 45 | 86365 | 52 |
| 23 | ದಾವಣಗೆರೆ | 39 | 75925 | 51 |
| 24 | ಮಂಡ್ಯ | 26 | 50950 | 51 |
| 25 | ವಿಜಯಪುರ | 63 | 128848 | 49 |
| 26 | ಉತ್ತರ ಕನ್ನಡ | 26 | 53842 | 48 |
| 27 | ಉಡುಪಿ | 18 | 37666 | 48 |
| 28 | ದಕ್ಷಿಣ ಕನ್ನಡ | 41 | 90333 | 45 |
| 29 | ಬಾಗಲಕೋಟೆ | 31 | 99573 | 31 |
| 30 | ಬೆಂಗಳೂರು ನಗರ | 65 | 315490 | 21 |
| 31 | ಚಿಕ್ಕಮಗಳೂರು | 7 | 39969 | 18 |
| | ಒಟ್ಟು | 1640 | 2553882 | 64 |

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. [illegible]
ಬೆಂಗಳೂರು-[illegible]

ಅನುಬಂಧ - 3

ಅನುಬಂಧ-3(ಪ್ರಶ್ನೆ ಸಂಖ್ಯೆ-56)




ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

ಅನುಬಂಧ-4

# ಅನುಬಂಧ-4

ನವಜಾತ ಶಿಶುಗಳ ಮರಣ ದರವನ್ನು ಕಡಿಮೆ ಮಾಡಲು ಮತ್ತು ಆರೋಗ್ಯ ವೃಧ್ಧಿಸಲು ಆಧುನಿಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ವಿವಿಧ ಆರೋಗ್ಯ ಕಾರ್ಯಕ್ರಮಗಳು ಜಾರಿಯಲ್ಲಿರುತ್ತವೆ. ಅವುಗಳು ಕೆಳಕಂಡಂತಿದೆ,

**ಆರೋಗ್ಯ ಸೇವೆಗಳು:**

I. ಸೌಲಭ್ಯ ಆಧಾರಿತ ಸೇವೆಗಳು
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU)
- ನವಜಾತ ಸ್ಥಿರೀಕರಣ ಘಟಕ (NBSU)
- ನವಜಾತ ಶಿಶು ಆರೈಕೆ ಕಾರ್ನರ್ (NBCC)
- ಕಾಂಗರೂ ಮದರ್ ಕೇರ್ ಅಂಡ್ ಲ್ಯಾಕ್ಟೇಶನ್ ಕ್ಲಿನಿಕ್ (KMC)
- ಸಮಗ್ರ ಹಾಲುಣಿಸುವ ನಿರ್ವಹಣಾ ಕೇಂದ್ರಗಳು (CLMC)

II. ಸಮುದಾಯ ಆಧಾರಿತ ಸೇವೆಗಳು
- ಗೃಹ ಆಧಾರಿತ ನವಜಾತ ಶಿಶು ಆರೈಕೆ (HBNC).
- ಗೃಹ ಆಧಾರಿತ ಚಿಕ್ಕ ಮಕ್ಕಳ ಆರೈಕೆ (HBYC).

III. ಸಮುದಾಯ ಜಾಗೃತಿ ಕಾರ್ಯಕ್ರಮಗಳು
- ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF).
- ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS).
- ರಾಷ್ಟ್ರೀಯ ನವಜಾತ ಶಿಶು ಸಪ್ತಾಹ (NNW).
- ವಿಶ್ವ ಸ್ತನ್ಯಪಾನ ಸಪ್ತಾಹ (WBW).

IV. ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ
- ತಾಯಿಯ ಸಂಪೂರ್ಣ ವಾತ್ಸಲ್ಯ ಹಾಗೂ ಶಿಶು ಮತ್ತು ಚಿಕ್ಕ ಮಕ್ಕಳ ಪೋಷಣೆ (MAA-IYCF).
- ಸೌಲಭ್ಯ ಆಧಾರಿತ ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (F-IMNCI).
- ನವಜಾತ ಮತ್ತು ಬಾಲ್ಯದ ಕಾಯಿಲೆಗಳ ಸಮಗ್ರ ನಿರ್ವಹಣೆ (IMNCI).
- ಸೌಲಭ್ಯ ಆಧಾರಿತ ನವಜಾತ ಶಿಶು ಆರೈಕೆ (FBNC).
- ಚಿಕ್ಕ ಮಗುವಿಗೆ ಮನೆ ಆಧಾರಿತ ಆರೈಕೆ (HBYC)
- ನವಜಾತ ಸ್ಥಿರೀಕರಣ ಘಟಕ (NBSU)
- ನವಜಾತ ಶಿಶು ಸುರಕ್ಷಾ ಕಾರ್ಯಕ್ರಮ (NSSK)

V. ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK) ಡ್ರಗ್ಸ್ ಮತ್ತು ಡಯಾಗ್ನೋಸ್ಟಿಕ್ಸ್
- ಜನನಿ ಶಿಶು ಸುರಕ್ಷಾ ಕಾರ್ಯಕ್ರಮ ಉಚಿತ ರೆಫರಲ್ ಸೇವೆ

VI. ಅನಿಮಿಯ ಮುಕ್ತ ಕರ್ನಾಟಕ ಕಾರ್ಯಕ್ರಮದಡಿ IFA ಪೋಷಕಾಂಶದ ಪೂರೈಕೆ
- ರಕ್ತಹೀನತೆ ನಿಯಂತ್ರಣಕ್ಕಾಗಿ Iron and Folic Acid Syrup ನ ಪೂರಕ ಪೋಷಕಾಂಶ ದ್ರಾವಣ.

VII. ನವಜಾತ ಶಿಶು ಆಂಬುಲೆನ್ಸ್ ಸೇವೆಗಳು

**ಸೌಲಭ್ಯ ಆಧಾರಿತ ಸೇವೆಗಳು:**

- **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1 ಹಂತದ ಆರೈಕೆ**

ಹೆರಿಗೆಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳುಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ (ಒಟ್ಟು 1084) ನವಜಾತ ಶಿಶುಗಳ ಆರೈಕೆಗಾಗಿ ನವಜಾತ ಶಿಶು ಆರೈಕೆ ಕೇಂದ್ರಗಳು (NBCC) ಕಾರ್ಯನಿರ್ವಹಿಸುತ್ತಿವೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸಿತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ. ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ 8,04,950 ಜೀವಂತ ಜನನಗಳಿಗೆ ಅವಶ್ಯಕ ಸೇವೆ ನೀಡಲಾಗಿರುತ್ತದೆ (ವರದಿ : HMIS).

- **ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2 ಹಂತದ ಆರೈಕೆ**

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕಗಳಲ್ಲಿ ಜನನ ಸಮಯದಲ್ಲಿ ತೊಂದರೆಗೊಳಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ಅತಿಸಾರ ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸಿದ್ದು ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ ಒಟ್ಟು 21805 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ.87.2 ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

- **ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3 ಹಂತದ ಆರೈಕೆ**

ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಆಯ್ದ ಹೆಚ್ಚಿನ ಹೆರಿಗೆಗಳಾಗುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 50 SNCUಗಳು ಸ್ಥಾಪಿಸಲಾಗಿದೆ. 24×7 ಸೇವೆಗಳನ್ನು ಒದಗಿಸಲು ತರಬೇತಿ ಪಡೆದ ಮಕ್ಕಳ ತಜ್ಞರು, ವೈದ್ಯರು, ಶುಶ್ರೂಷಕರು ಮತ್ತು ಸಹಾಯಕ ಸಿಬ್ಬಂದಿಯಿಂದ SNCUಗಳನ್ನು ನಿರ್ವಹಿಸಲಾಗುತ್ತಿದೆ. 50 SNCUಗಳಲ್ಲಿ ಒಟ್ಟು 1138 ಹಾಸಿಗೆಗಳಿದ್ದು, ಏಪ್ರಿಲ್ 2023 ರಿಂದ ಮಾರ್ಚ್- 2024 ರವರೆಗೆ 80,586 ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ. 84.55% ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ. ನವಜಾತ ಶಿಶುವಿಗೆ ಬೆಂಬಲ ಆರೈಕೆಯನ್ನು ಬಲಪಡಿಸಲು 40 SNCUಗಳಲ್ಲಿ ಕಾಂಗರೂ ಮದರ್ ಕೇರ್ (KMC) ward ಗಳು ಮತ್ತು ಹಾಲುಣಿಸುವ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ಕಡಿಮೆ ಜನನ ತೂಕದ ಶಿಶುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಆರಂಭಿಕ ಸ್ತನ್ಯಪಾನ ಮತ್ತು ಸಂಪೂರ್ಣ

ಸ್ತನ್ಯಪಾನದ (exclusive breastfeeding) ಮಹತ್ವವನ್ನು ಪೋಷಕರಿಗೆ ತಿಳಿಸಿ ಕಾಂಗರೂ ಮಾದರಿ ಆರೈಕೆಯನ್ನು ನೀಡಲು ಉತ್ತೇಜಿಸುತ್ತಾರೆ.

- **ಸಮಗ್ರ ಹಾಲುಣಿಸುವ ನಿರ್ವಹಣಾ ಕೇಂದ್ರಗಳು (CLMC):**

ಸಮಗ್ರ ಹಾಲುಣಿಸುವಿಕೆ ನಿರ್ವಹಣಾ ಕೇಂದ್ರ (CLMC) ಆಸ್ಪತ್ರೆಯೊಳಗಿನ ಎಲ್ಲಾ ತಾಯಂದಿರಿಗೆ ಸಮಗ್ರ ಹಾಲುಣಿಸುವ ಬೆಂಬಲ ಮತ್ತು ನಿರ್ವಹಣೆಯನ್ನು ಒದಗಿಸುವ ಉದ್ದೇಶಕ್ಕಾಗಿ ರಾಜ್ಯದಲ್ಲಿ 8 ಆಸ್ಪತ್ರೆಗಳಲ್ಲಿ CLMC ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪ್ರಸ್ತುತವಾಗಿ, ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆ, ಘೋಷಾ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ; ಲೇಡಿ ಗೋಶೆನ್ ಆಸ್ಪತ್ರೆ, DK; ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹಾಸನ; ಬೆಳಗಾವಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಬೆಳಗಾವಿ, ಶಿವಮೊಗ್ಗ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಶಿವಮೊಗ್ಗ; ಕಲಬುರ್ಗಿ ಜಿಲ್ಲಾ ಆಸ್ಪತ್ರೆ, ಕಲಬುರ್ಗಿ ಇಲ್ಲಿ ಸ್ಥಾಪಿಸಲಾಗಿದ್ದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ.

**ಸಮುದಾಯ ಆಧಾರಿತ ಸೇವೆಗಳು:**

- **ಮನೆ ಆಧಾರಿತ ನವಜಾತ ಶಿಶು ಆರೈಕೆ (HBNC):** ಆಶಾ ಕಾರ್ಯಕರ್ತೆಯರು ಹೆರಿಗೆಯ ನಂತರದ ಮೊದಲ 42 ದಿನಗಳಲ್ಲಿ 6-7 ಬಾರಿ ನವಜಾತ ಶಿಶುವಿನ ಮನೆಗಳಿಗೆ ಭೇಟಿ ನೀಡುತ್ತಾರೆ. 41,565 ಆಶಾ ಕಾರ್ಯಕರ್ತೆಯರಿಗೆ ಸಾಮಾನ್ಯ ನವಜಾತ ಶಿಶು ಕಾಯಿಲೆಗಳನ್ನು ಗುರುತಿಸಲು ಮತ್ತು ಸ್ತನ್ಯಪಾನ ಮತ್ತು ನವಜಾತ ಶಿಶುವಿನ ಆರೈಕೆಯ ಬಗ್ಗೆ ತಾಯಂದಿರಿಗೆ ಶಿಕ್ಷಣ ನೀಡಲು ತರಬೇತಿ ನೀಡಲಾಗಿದೆ. ನವಜಾತ ಶಿಶುವಿನ ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಅವರಿಗೆ ಅಗತ್ಯ ಉಪಕರಣಗಳು ಮತ್ತು ಔಷಧಿಗಳನ್ನು ಒಳಗೊಂಡಿರುವ ಕಿಟ್ ಅನ್ನು ಒದಗಿಸಲಾಗಿದೆ. 2023-24 ನೇ ಸಾಲಿನಲ್ಲಿ ಒಟ್ಟು 7,11,088 (88%) ನವಜಾತ ಶಿಶುಗಳಿಗೆ HBNC ಸೇವೆಗಳನ್ನು ನೀಡಲಾಗಿದೆ.
- **ಚಿಕ್ಕ ಮಕ್ಕಳಿಗಾಗಿ ಮನೆ ಆಧಾರಿತ ಆರೈಕೆ (HBYC):** HBYC ಕಾರ್ಯಕ್ರಮದಡಿ ಆಶಾ ಕಾರ್ಯಕರ್ತೆಯರು (3, 6, 9, 12 ಮತ್ತು 15 ನೇ ತಿಂಗಳುಗಳು) ಐದು ಮನೆ ಭೇಟಿಗಳನ್ನು ನೀಡಿ, ಮಕ್ಕಳ ಆರೋಗ್ಯದಲ್ಲಿ ನ್ಯೂನತೆ ಕಾಣಿಸಿದಲ್ಲಿ ಆ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವ ಕಾರ್ಯಕ್ರಮ ಅನುಷ್ಠಾನವಾಗಿದೆ. ರಾಜ್ಯಾದ್ಯಂತ 32510 ಆಶಾ ಕಾರ್ಯಕರ್ತೆಯರು HBYC ಅಡಿಯಲ್ಲಿ ತರಬೇತಿ ಪಡೆದಿದ್ದು ಎಲ್ಲಾ ಜಿಲ್ಲೆಗಳು ಏಪ್ರಿಲ್ 2023 ರಿಂದ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ.

**ಸಮುದಾಯ ಜಾಗೃತಿ ಕಾರ್ಯಕ್ರಮಗಳು:**

- **ತೀವ್ರವಾದ ಅತಿಸಾರ ನಿಯಂತ್ರಣ ಪಾಕ್ಷಿಕ (IDCF):** ಅತಿಸಾರ ನಿರ್ವಹಣೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿ ಮೂಡಿಸಲು IDCF ಪಾಕ್ಷಿಕವನ್ನು ಆಚರಿಸಲಾಗುತ್ತಿದೆ. ಸದರಿ ಪಾಕ್ಷಿಕಾಚರಣೆ ಸಂದರ್ಭದಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರು ಮತ್ತು ಪ್ರಾಥಮಿಕ ಆರೋಗ್ಯ ಶುಶ್ರೂಷಕರು ಗಳಂತಹ ಎಲ್ಲಾ ಮೊಂಚೂಣಿ ಕಾರ್ಯಕರ್ತರು ORS ಪೊಟ್ಟಣಗಳು ಮತ್ತು Zinc Sulphate ಮಾತ್ರೆಗಳ ಸಕ್ರಿಯ ಬಳಸುವಿಕೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ಆರೋಗ್ಯ ಕಾರ್ಯಕರ್ತರು 5 ವರ್ಷದೊಳಗಿನ ಮಕ್ಕಳ ಮನೆಗಳಿಗೆ ಭೇಟಿ ನೀಡುತ್ತಾರೆ ಮತ್ತು ORS ದ್ರಾವಣ ತಯಾರಿಕೆ, ಮನೆಯಲ್ಲಿ ಅತಿಸಾರ ನಿರ್ವಹಣೆ, ನೈರ್ಮಲ್ಯತೆ, ಕೈ ತೊಳೆಯುವ ತಂತ್ರಗಳ ಬಗ್ಗೆ ಪೋಷಕರಿಗೆ ಜಾಗೃತಿ ಮೂಡಿಸುತ್ತಾರೆ. 2023 ನೇ ಸಾಲಿನಲ್ಲಿ ನವೆಂಬರ್ 16 ರಿಂದ 28ರ ವರೆಗೆ IDCF ಪಾಕ್ಷಿಕವನ್ನು ಆಚರಿಸಲಾಗಿದೆ. 2023 ರಲ್ಲಿ, 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಹೊಂದಿರುವ 54,08,533 ಕುಟುಂಬಗಳು ORS ಪೊಟ್ಟಣವನ್ನು ಪೂರ್ವ-ಸ್ಥಾನೀಕರಣ ಮಾಡಿದ್ದು, ರಾಜ್ಯದಾದ್ಯಂತ 95% ಪ್ರಗತಿಯನ್ನು ಇಲಾಖೆಯು ಸಾಧಿಸಿದೆ. 1,50,112 ಮಕ್ಕಳನ್ನು ಅತಿಸಾರದಿಂದ

ಗುರುತಿಸಲಾಗಿದ್ದು, ಅವರಲ್ಲಿ 94% ರಷ್ಟು ಮಕ್ಕಳಿಗೆ ORS ಸ್ಯಾಚೆಟ್‌ಗಳನ್ನು ಮತ್ತು 89% ರಷ್ಟು ಮಕ್ಕಳಿಗೆ ಝಿಂಕ್ ಮಾತ್ರೆಗಳನ್ನು ನೀಡಲಾಗಿದೆ.

- **ನ್ಯುಮೋನಿಯಾವನ್ನು ಯಶಸ್ವಿಯಾಗಿ ತಟಸ್ಥಗೊಳಿಸಲು ಸಾಮಾಜಿಕ ಜಾಗೃತಿ ಮತ್ತು ಕ್ರಮ (SAANS):** ಕಡಿಮೆ ಜನನದ ತೂಕ, ಅಪೌಷ್ಟಿಕತೆ, ಒಳಾಂಗಣ ವಾಯುಮಾಲಿನ್ಯ, ರೋಗ ನಿರೋಧಕ ಶಕ್ತಿಯ ಕೊರತೆ, ನೈರ್ಮಲ್ಯದ ಕೊರತೆ ಮತ್ತು ಇತರ ಅನೇಕ ಸಾಮಾಜಿಕ-ಆರ್ಥಿಕ ಅಂಶಗಳಂತಹ ಅಪಾಯಕಾರಿ ಅಂಶಗಳ ಸಂಯೋಜನೆಯಿಂದ ಉಂಟಾಗುವ ಬಾಲ್ಯದ ನ್ಯುಮೋನಿಯಾ ಗುರುತಿಸುವಿಕೆ, ನಿರ್ವಹಣೆ ಮತ್ತು ಸೂಕ್ತ ರೆಫರಲ್ ಸೇವೆಗಳ ಬಗ್ಗೆ ಜಾಗೃತಿ ಮೂಡಿಸಲು ನವೆಂಬರ್ 12 ರಿಂದ ಫೆಬ್ರುವರಿ 28 ರವರೆಗೆ SAANS ಅಭಿಯಾನವನ್ನು ನಡೆಸಲಾಗಿರುತ್ತದೆ. ಆಶಾ ಕಾರ್ಯಕರ್ತರು ಮತ್ತು ಕ್ಷೇತ್ರ ಮಟ್ಟದ ಆರೋಗ್ಯ ಕಾರ್ಯಕರ್ತರು ಮನೆಗಳಿಗೆ ಭೇಟಿ ನೀಡಿ ಜಾಗೃತಿ ಚಟುವಟಿಕೆಗಳನ್ನು ನಡೆಸಿರುತ್ತಾರೆ. 2023-24 ನೇ ಸಾಲಿನಲ್ಲಿ 40,202 ಮಕ್ಕಳನ್ನು SAANS ಕಾರ್ಯಕ್ರಮದಡಿಯಲ್ಲಿ ಭೇಟಿ ನೀಡಿ ರೋಗಲಕ್ಷಣಗಳಿಗಾಗಿ ಪರೀಕ್ಷಿಸಲಾಗಿದೆ, 20,852 ಮಕ್ಕಳು ಸೌಮ್ಯ/ತೀವ್ರ ರೋಗಲಕ್ಷಣಗಳೊಂದಿಗೆ ಪತ್ತೆಯಾಗಿವೆ ಮತ್ತು 6699 ಮಕ್ಕಳನ್ನು ನ್ಯುಮೋನಿಯಾ ನಿರ್ವಹಣೆಗಾಗಿ ಉನ್ನತ ಕೇಂದ್ರಗಳಿಗೆ ಚಿಕಿತ್ಸೆಗಳಿಗಾಗಿ ರೆಫರ್ ಮಾಡಲಾಗಿದೆ.
- **ರಾಷ್ಟ್ರೀಯ ನವಜಾತ ಶಿಶು ಸಪ್ತಾಹ:** ಕರ್ನಾಟಕದಲ್ಲಿ 2016 ರಿಂದ ನವಜಾತ ಶಿಶು ಸಪ್ತಾಹವನ್ನು ಆಚರಿಸಲಾಗುತ್ತಿದೆ. ಇದು ನವಜಾತ ಶಿಶುಗಳ ಆರೈಕೆಗೆ ಪ್ರಾಮುಖ್ಯತೆಯನ್ನು ನೀಡಲು ಮತ್ತು ನವಜಾತ ಶಿಶುಗಳ ಆರೈಕೆ ಮತ್ತು ಸ್ತನ್ಯಪಾನವನ್ನು ಸುಧಾರಿಸುವ ಮಹತ್ವವನ್ನು ಒತ್ತಿಹೇಳುವ ಕಾರ್ಯಕ್ರಮವಾಗಿದೆ. ಇದನ್ನು ಪ್ರತಿ ವರ್ಷ ನವೆಂಬರ್ ಎರಡನೇ ವಾರದಲ್ಲಿ ಆಚರಿಸಲಾಗುತ್ತದೆ. ನವೆಂಬರ್ 2023 ರಲ್ಲಿ 39,797 ನವಜಾತ ಶಿಶುಗಳಿಗೆ ಭೇಟಿ ನೀಡಲಾಗಿದೆ ಮತ್ತು ಸೇವೆಯ ಗುಣಮಟ್ಟ ಸುಧಾರಿಸುವ ಸಂಬಂಧ ಎಲ್ಲಾ 50 SNCU ಗಳ MusQan ಬೇಸ್‌ಲೈನ್ ಮೌಲ್ಯಮಾಪನವನ್ನು ನಡೆಸಲಾಗಿದೆ.
- **ವಿಶ್ವ ಸ್ತನ್ಯಪಾನ ಸಪ್ತಾಹ:** 2024 ಆಗಸ್ಟ್ ಮೊದಲ ವಾರದಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಸ್ತನ್ಯಪಾನದ ಪ್ರಾಮುಖ್ಯತೆ ಮತ್ತು ಸ್ತನ್ಯಪಾನದಲ್ಲಿ ಪೋಷಕರ ಪಾತ್ರವನ್ನು ಒತ್ತಿಹೇಳಲು ವಿಶ್ವ ಸ್ತನ್ಯಪಾನ ಸಪ್ತಾಹವನ್ನು ರಾಜ್ಯದಾದ್ಯಂತ ಆಚರಿಸಲಾಗಿದೆ.

**ಆರೋಗ್ಯ ಕಾರ್ಯಕರ್ತರ ಸಾಮರ್ಥ್ಯ ವರ್ಧನೆ:**

- FBNC ತರಬೇತಿ ನಡೆಸಲು ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರವನ್ನು ಸ್ಥಾಪಿಸಲಾಗಿದೆ. 2023-24ರಲ್ಲಿ 12 ತರಬೇತಿ ತಂಡಗಳ ಮೂಲಕ ಒಟ್ಟು 289 ಶುಶ್ರೂಷಕರಿಗೆ ತರಬೇತಿ ನೀಡಲಾಗಿದೆ.
- IMNCI, F-IMNCI, NSSK, MAA-IYCF ತರಬೇತಿಗಳನ್ನು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ತರಬೇತಿ ನೀಡಲಾಗಿದೆ.
- NBSU ತರಬೇತಿಗಳು ಮತ್ತು software ಏಕೀಕರಣ ತರಬೇತಿಗಳನ್ನು ರಾಜ್ಯ ಮಕ್ಕಳ ಆರೋಗ್ಯ ವಿಭಾಗವು ನಡೆಸಲಾಗಿರುತ್ತದೆ.

**ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಆರ್ಥಿಕ ನೆರವು ಯೋಜನೆಗಳು:**

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ (JSSK):ಅನಾರೋಗ್ಯದಿಂದ ಬಳಲುತ್ತಿರುವ ಶಿಶುಗಳ ಚಿಕಿತ್ಸೆಗಾಗಿ ಪೋಷಕರಿಂದ ಖರ್ಚು ಮಾಡುವುದನ್ನು ಕಡಿಮೆ ಮಾಡಲು JSSK ಕಾರ್ಯಕ್ರಮವು ಅನುಷ್ಠಾನದಲ್ಲಿದೆ. 2023-24 ನೇ ಸಾಲಿನಲ್ಲಿ JSSK ಅಡಿಯಲ್ಲಿ ಒಟ್ಟು 1,15,920 ಮಕ್ಕಳಿಗೆ JSSK ಸೌಲಭ್ಯ ನೀಡಲಾಗಿರುತ್ತದೆ.

**ಅನಿಮಿಯ ಮುಕ್ತ ಪೌಷ್ಠಿಕ ಕರ್ನಾಟಕ:**

ಅನೀಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ 6 ತಿಂಗಳಿಂದ 5 ವರ್ಷದೊಳಗಿನ 43,25,585 ಮಕ್ಕಳಿಗೆ ಪ್ರತಿವಾರ ರೋಗನಿರೋಧಕ ಕಬ್ಬಿಣ ಮತ್ತು ಫೋಲಿಕ್ ಆಸಿಡ್ ಸಿರಪ್ ಅನ್ನು ನೀಡುವ ಗುರಿಯನ್ನು ಹೊಂದಿದ್ದು 2023-24 ನೇ ಸಾಲಿಗೆ ಶೇ.84 ರಷ್ಟು ಮಕ್ಕಳಿಗೆ ಕಬ್ಬಿಣ ಮತ್ತು ಫೋಲಿಕ್ ಆಸಿಡ್ ಸಿರಪ್ ಅನ್ನು ನೀಡಲಾಗಿದೆ.

**ನವಜಾತ ಶಿಶುಗಳ ಆಂಬ್ಯುಲೆನ್ಸ್ ಸೇವೆಗಳು:**

ಹೆಚ್ಚಿನ ಚಿಕಿತ್ಸೆಗಾಗಿ ನವಜಾತ ಶಿಶುಗಳನ್ನು ಮೇಲ್ದರ್ಜೆ ಸೌಲಭ್ಯವುಳ್ಳ ಆಸ್ಪತ್ರೆಗೆ ಕರೆದೊಯ್ಯಲು ಆಂಬ್ಯುಲೆನ್ಸ್ ಸೇವೆಗಳನ್ನು ಮೈಸೂರು, ಬೆಂಗಳೂರು, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನವಜಾತ ಶಿಶುಗಳ ಆಂಬುಲೆನ್ಸ ಸೇವೆಗಳನ್ನು ಪ್ರಾರಂಭ ಮಾಡಲಾಗಿದೆ. ನವಜಾತ ಶಿಶುಗಳಿಗೆ ಪ್ರಯಾಣದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವಿಶೇಷವಾಗಿ ಟ್ರಾನ್ಸ್‌ಪೋರ್ಟ್ ಇನ್ಕ್ಯುಬೇಟರ್, ಟ್ರಾನ್ಸ್‌ಪೋರ್ಟ್ ವೆಂಟಿಲೇಟರ್, ಆಮ್ಲಜನಕ ಸಿಲೆಂಡರ್, ಸಿರಿಂಜ್ ಪಂಪ್, ಮಲ್ಟಿ-ಚಾನಲ್ ಮಾನಿಟರ್, ಪಲ್ಸ್ ಆಕ್ಸಿಮೀಟರ್, ಸಕ್ಷನ್‌ಅಪರೇಟಸ್ ಸೇರಿದಂತೆ ವಿಶೇಷ ಉಪಕರಣಗಳನ್ನು ಅಳವಡಿಸಲಾಗಿದೆ.


ಉಪ ನಿರ್ದೇಶಕರು-ಮಕ್ಕಳ ಆರೋಗ್ಯ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಅನುಬಂಧ-5

ಅನುಬಂಧ-5

ಅನುಬಂಧ-5(ಪ್ರಶ್ನೆ ಸಂಖ್ಯೆ-56)

ಕರ್ನಾಟಕ ರಾಜ್ಯದ ತಾಯಿ ಮರಣದ ದರವು ಈ ಕೆಳಕಂಡಂತಿರುತ್ತದೆ.




2004-06 ರಲ್ಲಿ ತಾಯಿ ಮರಣ ಪ್ರಮಾಣವು 213 ಇದ್ದು ಇತ್ತೀಚಿನ 2018-20 SRS ಸಮೀಕ್ಷೆ ವರದಿಯಲ್ಲಿ ಇಳಿಮುಖವಾಗಿರುತ್ತದೆ ಅಂದರೆ ಕಳೆದ 15 ವರ್ಷಗಳಲ್ಲಿ ಶೇ.67 ರಷ್ಟು ತಾಯಿ ಮರಣಗಳು ತಡೆಗಟ್ಟಿದಂತಾಗಿರುತ್ತದೆ.

ಗರ್ಭಿಣಿಯರ ಆರೋಗ್ಯ ತಪಾಸಣೆ ಮಾಡಿ ಸಂಪೂರ್ಣ ನಿಗಾ ವಹಿಸಿ ತಾಯಿ ಮತ್ತು ಮಕ್ಕಳ ಸಾವಿನ ಪ್ರಮಾಣವನ್ನು ತಗ್ಗಿಸುವ ನಿಟ್ಟಿನಲ್ಲಿ ಹಾಗೂ ತಾಯಿ ಮರಣವನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

- ರಕ್ತಹೀನತೆ ತಡೆಗಟ್ಟುವಿಕೆ:
  - ➢ ಕರ್ನಾಟಕ ರಾಜ್ಯದಲ್ಲಿ ಗರ್ಭಾವಸ್ಥೆಯಲ್ಲಿ ರಕ್ತ ಹೀನತೆಯನ್ನು ತಡೆಗಟ್ಟಲು iron sucrose ಚುಚ್ಚುಮದ್ದನ್ನು ತೀವ್ರತರ ರಕ್ತ ಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಬಾಣಂತಿಯರಿಗೆ ಅಲ್ಲದೆ ಮಾಧ್ಯಮಿಕ ಅಂದರೆ Hb % 10 ಗ್ರಾಂ ಗಿಂತ ಕೆಳಗಡೆ ಇರುವ ಎಲ್ಲಾ ಗರ್ಭಿಣಿ ಬಾಣಂತಿಯರಿಗೂ ನೀಡಲಾಗುತ್ತಿದೆ.
  - ➢ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ದಿನಕ್ಕೆ 2 ಬಾರಿಯಂತೆ ಒಟ್ಟು 6 ತಿಂಗಳಿಗೆ 360 IFA ಮಾತ್ರೆಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ. ರಕ್ತದ ಹೀಮೋಗ್ಲೋಬಿನ್ ಹೆಚ್ಚಿಸಲು ಈ ಮಾತ್ರೆಗಳನ್ನು CHOs, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಆಶಾ ಕಾರ್ಯಕರ್ತೆಯರು ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವಿತರಿಸಲಾಗುತ್ತಿದೆ
  - ➢ ತೀವ್ರತರ ರಕ್ತಹೀನತೆಯಿಂದ ಬಳಲುತ್ತಿರುವ ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿ JSSK ಕಾರ್ಯಕ್ರಮದಡಿಯಲ್ಲಿ Blood Transfusion ವ್ಯವಸ್ಥೆ ಮಾಡಲಾಗಿದೆ.
- ಅಧಿಕ ರಕ್ತದ ಒತ್ತಡ & ಅಪೂರ್ಣ ಗರ್ಭಿಣಿ ಆರೈಕೆ – ಈ ಅಂಶವನ್ನು ಪ್ರತಿ ತಿಂಗಳು ನಡೆಸಲಾಗುವ PMSMA & e-PMSMA ಕಾರ್ಯಕ್ರಮಗಳಿಂದ ಸರಿಪಡಿಸಲಾಗುತ್ತಿದೆ.
- ಗರ್ಭಾವಸ್ಥೆಯ ಮೊದಲ ತ್ರೈಮಾಸಿಕದಲ್ಲಿ ಶೇಕಡ 100ರಷ್ಟು ಆಗದಿರುವುದು- ಇದನ್ನು ಸರಿಪಡಿಸಲು ಇಲಾಖೆಯ ಮುಂಚೂಣಿ ಕಾರ್ಯಕರ್ತೆಯರಿಂದ ಮನೆ ಭೇಟಿಯನ್ನು ಉತ್ತೇಜಿಸಿ ಮೂತ್ರ ತಪಾಸಣೆಯನ್ನು ನೆರವೇರಿಸಿ ನೋಂದಾಸುವ ಕ್ರಮಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

- ಅತೀವ ರಕ್ತ ಸ್ರಾವ & ಹೆರಿಗೆ ಸಮಯದ ಸೋಂಕು – ಈ ತೊಡಕನ್ನು ನಿವಾರಿಸಲು ವೈದ್ಯಾಧಿಕಾರಿಗಳು ಹಾಗೂ ಶುಶ್ರೂಷಕರಿಗೆ ಪುನರ್ ಮನನ ತರಬೇತಿನಿವಾರಿಸಲಾಗುತ್ತಿದೆ.

## ತಾಯಿ ಆರೋಗ್ಯ ವಿಭಾಗದ ಯೋಜನೆಗಳು:

### 1. ಜನನಿ ಸುರಕ್ಷಾ ಯೋಜನೆ(JSY):

ಆರೋಗ್ಯ ಸಂಸ್ಥೆಗಳಲ್ಲಿ ಹೆರಿಗೆ ಮಾಡಿಸಿಕೊಂಡಿದ್ದಲ್ಲಿ BPL ವರ್ಗಕ್ಕೆ ಸೇರಿದ ಗರ್ಭಿಣಿಯರಿಗೆ ಹೆರಿಗೆಯಾದ ಕೂಡಲೇ ರೂ.600/700 ಗಳನ್ನು ನೇರ ನಗದು ವರ್ಗಾವಣೆ ಮೂಲಕ ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ನೀಡಲಾಗುತ್ತಿದೆ. ಈ ಯೋಜನೆಯಿಂದ ಸಾಂಸ್ಥಿಕ ಹೆರಿಗೆ ಗಳಿಗೆ ಉತ್ತೇಜನ ನೀಡಿ ತಾಯಿ ಮರಣವನ್ನು ಕಡಿಮೆ ಮಾಡಲು ಸಹಾಯಕವಾಗಿರುತ್ತದೆ.

### 2. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK):

ಜನನಿ ಶಿಶು ಸುರಕ್ಷಾ ಕಾರ್ಯಕ್ರಮ(JSSK) ಕಾರ್ಯಕ್ರಮ ಈ ಯೋಜನೆಯಡಿಲ್ಲಿ ಕೆಳಕಂಡ 5 ಉಪಯುಕ್ತ components ಗಳು ಎಲ್ಲಾವರ್ಗದ ಗರ್ಭಿಣಿ ಮತ್ತು ಬಾಣಂತಿಯರಿಗೆ ಉಚಿತವಾಗಿರುತ್ತವೆ.

1. ಉಚಿತ ಊಟ
2. ಉಚಿತ ರಕ್ತ
3. ಉಚಿತ ಔಷಧಿ ಮತ್ತು consumables.
4. ಉಚಿತ ಸಾರಿಗೆ.
5. ಉಚಿತ ಪ್ರಯೋಗಾಲಯ ಪರೀಕ್ಷೆಗಳು

### 3. ಲಕ್ಷ್ಯ ಕಾರ್ಯಕ್ರಮದ ಅನುಷ್ಠಾನ:

ಲಕ್ಷಯ ಕಾರ್ಯಕ್ರಮ ರಾಜ್ಯದ ಸಾರ್ವತ್ರಿಕ ಹೆರಿಗೆ ಆಸ್ಪತ್ರೆಯಲ್ಲಿ ಗುಣಮಟ್ಟದ ಹೆರಿಗೆ ಸೇವೆಗಳನ್ನು ಮತ್ತು ನವಜಾತ ಶಿಶು ಸೇವೆಗಳನ್ನು ನೀಡಿ ತಾಯಿ ಮರಣ & ನವಜಾತ ಶಿಶು ಮರಣವನ್ನು ಕಡಿಮೆಮಾಡುವ ಉದ್ದೇಶದಿಂದ ರಾಜ್ಯ ದ 125 ಹೆರಿಗೆ ಆಸ್ಪತ್ರೆಗಳಲ್ಲಿ ಕಾರ್ಯಕ್ರಮವು ಅನುಷ್ಠಾನಗೊಂಡು ತಾಯಿ ಮರಣವನ್ನು ಕಡಿಮೆ ಮಾಡಲು ಅನುಕೂವಾಗುತ್ತಿದೆ. ಇದುವರೆಗೂ 123 ಹೆರಿಗೆ ಆಸ್ಪತ್ರೆಗಳು ಲಕ್ಷ್ಯ ಕಾರ್ಯ ಕ್ರಮದಡಿಯಲ್ಲಿ ಪ್ರಾಮಾಣಿಕರಣ (certification) ಸಾಧಿಸಿರುತ್ತವೆ.

### 4. ಪ್ರಸೂತಿ ತೀವ್ರ ನಿಗಾ ಘಟಕಗಳು:

ರಾಜ್ಯದ 18 ಜಿಲ್ಲಾ ಆಸ್ಪತ್ರೆಗಳ ಲ್ಲಿ ಪ್ರಸೂತಿ ತೀವ್ರ ನಿಗಾ ಘಟಕಗಳನ್ನುಸ್ಥಾಪಿಸಲಾಗಿದ್ದು ಇದರಿಂದ ಗರ್ಭಾವಸ್ಥೆ ಮತ್ತು ಪ್ರಸೂತಿಯಿಂದ ಉಂಟಾಗುವ ಮಾರಣಾಂತಿಕ ತೊಡುಕುಗಳನ್ನು ನಿವಾರಿಸಲು ಹಾಗೂ ರೋಗಿಯನ್ನು ಉಳಿಸಲಿ ಸಹಾಯವಾಗುತ್ತಿದೆ.

### 5. ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ನಿರ್ಮಾಣ:

ಇದುವರೆಗೂ 62 ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ನಿರ್ಮಿಸಲಾಗಿದ್ದು ಇದರಿಂದ ಗರ್ಭಿಣಿ & ಬಾಣಂತಿಯರಿಗೆ ಆರೈಕೆಯ ಪ್ರಾಶಸ್ತ್ಯವನ್ನು ನೀಡಲಾಗುತ್ತಿದೆ.

### 6. FRUs ಗಳ ಬಲಪಡಿಸುವಿಕೆ:

ರಾಜ್ಯದ 237 ಪ್ರಥಮ ಶಿಫಾರಸ್ಸು ಘಟಕಗಳನ್ನು ಅಗತ್ಯ ಮಾನವ ಸಂಪನ್ಮೂಲ, ಉಪಕರಣ ಮತ್ತು ತರಬೇತಿಯನ್ನು ನೀಡಿ 24/7 ಸಮಗ್ರ ಮಾತೃ ಆರೈಕೆಯನ್ನು ನೀಡಲು ಅನುಕೂಲವಾಗುತ್ತದೆ.

ಉಪನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

ಅನುಬಂಧ-5 (ಮುಂದುವರೆದ ಭಾಗ)

ಅನುಬಂಧ-4 (ಪ್ರಶ್ನೆ ಸಂಖ್ಯೆ-56)

ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೆಳಕಂಡ ಸೇವೆಗಳು ನೀಡಲು ಉದ್ದೇಶಿಸಲಾಗಿದೆ:

- 24x7 ಸಾಮಾನ್ಯ ಹೆರಿಗೆ
- 24x7 ಹೆರಿಗೆ OT
- ತೊಡಕು ಗರ್ಭಧಾರಣೆಯ ನಿರ್ವಹಣೆ(HRP Management)
- ಅಲ್ಟ್ರಾಸೌಂಡ್ ಸ್ಕ್ಯಾನಿಂಗ್
- 24x7 ನವಜಾತ ಶಿಶು ಆರೈಕೆ
- ಕುಟುಂಬ ಯೋಜನ ಸೇವೆಗಳು
- ಲಸಿಕೆ ಸೇವೆಗಳು(Immunization Services)
- ಪ್ರಯೋಗಾಲಯ ಸೇವೆಗಳು
- ನಗು-ಮಗು ಆಂಬ್ಯುಲೆನ್ಸ್ ಸೇವೆಗಳು
- ಜನನ ಮತ್ತು ಮರಣ ನೋಂದಣಿ

**ಕುಟುಂಬ ಕಲ್ಯಾಣ ಕಾರ್ಯಕ್ರಮದ ಲಭ್ಯವಿರುವ ವಿವಿಧ ಸೇವೆಗಳು:**
**ಕುಟುಂಬ ಯೋಜನೆ ವಿಧಾನಗಳು:**

1. **ಶಾಶ್ವತ ವಿಧಾನಗಳು:**
- ಸ್ತ್ರೀ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗಳು: ಹೆರಿಗೆಯ ತಕ್ಷಣ, ಮಧ್ಯಾಂತರ, ಲ್ಯಾಪ್ರೋಸ್ಕೋಪಿಕ್
- ಪುರುಷ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗಳು: ಹೊಲಿಗೆ ರಹಿತ ಶಸ್ತ್ರಚಿಕಿತ್ಸೆ

2. **ತಾತ್ಕಾಲಿಕ ವಿಧಾನಗಳು:**
- **ನುಂಗುವ ಗುಳಿಗೆಗಳು:** ಮಾಲಾ-ಎನ್: ಪ್ರತಿ ದಿನ ರಾತ್ರಿ ಒಂದು ಗುಳಿಗೆ.
- **ಛಾಯಾ:** (ನೂತನ ಗರ್ಭನಿರೋಧಕ) ವಾರಕ್ಕೆರಡು ಬಾರಿ ಮೊದಲ ಮೂರು ತಿಂಗಳುವಾರಕ್ಕೆ ಒಂದು ಬಾರಿ ತದನಂತರ
- **ತುರ್ತು ಗರ್ಭ ನಿರೋಧಕ ಗುಳಿಗೆಗಳು:** ತುರ್ತು ಸಂದರ್ಭದಲ್ಲಿ ಇತರ ಗರ್ಭನಿರೋಧಕಗಳ ಬಳಕೆ ತಪ್ಪಿದಾಗ
- ಕಾಪರ್-ಟಿ: ಮಧ್ಯಂತರ ವಂಕಿ ಅಳವಡಿಕೆ, ಪ್ರಸವ ನಂತರ ವಂಕಿ ಅಳವಡಿಕೆ.
- **ನಿರೋಧ್**
- ಅಂತರ ಚುಚ್ಚು ಮದ್ದು: (ನೂತನ ಗರ್ಭನಿರೋಧಕ) ಮೂರು ತಿಂಗಳಿಗೊಮ್ಮೆ

**24 ಗಂಟೆಗಳ ನವಜಾತ ಶಿಶು ಆರೈಕೆ ಸೌಲಭ್ಯ:**

- ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1 ಹಂತದ ಆರೈಕೆ
- ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2 ಹಂತದ ಆರೈಕೆ
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3 ಹಂತದ ಆರೈಕೆ
- ಕಾಂಗರೂ ಮದರ್ ಕೇರ್ ಅಂಡ್ ಲ್ಯಾಕ್ಟೇಶನ್ ಕ್ಲಿನಿಕ್ ಗಳು (KMC):
- ನವಜಾತ ಶಿಶುಗಳ ಆಂಬ್ಯುಲೆನ್ಸ್:

- **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1 ಹಂತದ ಆರೈಕೆ**

ಅನುಬಂಧ-6

ಅನುಬಂಧ-6

**ಅನುಬಂಧ-6 (ಪ್ರಶ್ನೆ ಸಂಖ್ಯೆ-56)**

**ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಕೆಳಕಂಡ ಸೇವೆಗಳು ನೀಡಲು ಉದ್ದೇಶಿಸಲಾಗಿದೆ:**

- 24x7 ಸಾಮಾನ್ಯ ಹೆರಿಗೆ
- 24x7 ಹೆರಿಗೆ OT
- ತೊಡಕು ಗರ್ಭಧಾರಣೆಯ ನಿರ್ವಹಣೆ(HRP Management)
- ಅಲ್ಟ್ರಾಸೌಂಡ್ ಸ್ಕ್ಯಾನಿಂಗ್
- 24x7 ನವಜಾತ ಶಿಶು ಆರೈಕೆ
- ಕುಟುಂಬ ಯೋಜನ ಸೇವೆಗಳು
- ಲಸಿಕೆ ಸೇವೆಗಳು(Immunization Services)
- ಪ್ರಯೋಗಾಲಯ ಸೇವೆಗಳು
- ನಗು-ಮಗು ಆಂಬ್ಯುಲೆನ್ಸ್ ಸೇವೆಗಳು
- ಜನನ ಮತ್ತು ಮರಣ ನೋಂದಣಿ

**ಕುಟುಂಬ ಕಲ್ಯಾಣ ಕಾರ್ಯಕ್ರಮದ ಲಭ್ಯವಿರುವ ವಿವಿಧ ಸೇವೆಗಳು:**
**ಕುಟುಂಬ ಯೋಜನೆ ವಿಧಾನಗಳು:**

1. **ಶಾಶ್ವತ ವಿಧಾನಗಳು:**
- ಸ್ತ್ರೀ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗಳು: ಹೆರಿಗೆಯ ತಕ್ಷಣ, ಮಧ್ಯಾಂತರ, **ಲ್ಯಾಪ್ರೋಸ್ಕೋಪಿಕ್**
- ಪುರುಷ ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗಳು: ಹೋಲಿಗೆ ರಹಿತ ಶಸ್ತ್ರಚಿಕಿತ್ಸೆ

2. **ತಾತ್ಕಾಲಿಕ ವಿಧಾನಗಳು:**
- **ನುಂಗುವ ಗುಳಿಗೆಗಳು:** ಮಾಲಾ-ಎನ್: ಪ್ರತಿ ದಿನ ರಾತ್ರಿ ಒಂದು ಗುಳಿಗೆ.
- **ಛಾಯಾ:** (ನೂತನ ಗರ್ಭನಿರೋಧಕ) ವಾರಕ್ಕೆರಡು ಬಾರಿ ಮೊದಲ ಮೂರು ತಿಂಗಳುವಾರಕ್ಕೆ ಒಂದು ಬಾರಿ ತದನಂತರ
- **ತುರ್ತು ಗರ್ಭ ನಿರೋಧಕ ಗುಳಿಗೆಗಳು:** ತುರ್ತು ಸಂದರ್ಭದಲ್ಲಿ ಇತರೆ ಗರ್ಭನಿರೋಧಕಗಳ ಬಳಕೆ ತಪ್ಪಿದಾಗ
- **ಕಾಪರ್-ಟಿ:** ಮಧ್ಯಂತರ ವಂಕಿ ಅಳವಡಿಕೆ, ಪ್ರಸವ ನಂತರ ವಂಕಿ ಅಳವಡಿಕೆ.
- **ನಿರೋಧ್**
- ಅಂತರ ಚುಚ್ಚು ಮದ್ದು: (ನೂತನ ಗರ್ಭನಿರೋಧಕ) ಮೂರು ತಿಂಗಳಿಗೊಮ್ಮೆ

**24 ಗಂಟೆಗಳ ನವಜಾತ ಶಿಶು ಆರೈಕೆ ಸೌಲಭ್ಯ:**

- ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1 ಹಂತದ ಆರೈಕೆ
- ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2 ಹಂತದ ಆರೈಕೆ
- ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3 ಹಂತದ ಆರೈಕೆ
- ಕಾಂಗರೂ ಮದರ್ ಕೇರ್ ಅಂಡ್ ಲ್ಯಾಕ್ಟೇಶನ್ ಕ್ಲಿನಿಕ್ ಗಳು (KMC):
- ನವಜಾತ ಶಿಶುಗಳ ಆಂಬ್ಯುಲೆನ್ಸ್:

- **ನವಜಾತ ಶಿಶುವಿನ ಆರೈಕೆ ಕಾರ್ನರ್ (NBCC): 1 ಹಂತದ ಆರೈಕೆ**

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು... ...ಗಳ ನಿರ್ದೇಶನಾಲಯ
...009

ಹೆರಿಗೆಗಳನ್ನು ನಿರ್ವಹಿಸುತ್ತಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಮಟ್ಟದ ಆಸ್ಪತ್ರೆಗಳುಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ (ಒಟ್ಟು 1084) ನವಜಾತ ಶಿಶುಗಳ ಆರೈಕೆಗಾಗಿ ನವಜಾತ ಶಿಶು ಆರೈಕೆ ಕೇಂದ್ರಗಳು (NBCC) ಕಾರ್ಯನಿರ್ವಹಿಸುತ್ತಿವೆ. ಹೆರಿಗೆ ಕೊಠಡಿಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಗುವನ್ನು ಬೆಚ್ಚಗಿಡಲು ರೇಡಿಯಂಟ್ ವಾರ್ಮರ್ ಸೌಲಭ್ಯ ಒದಗಿಸಲಾಗಿದೆ ಹಾಗೂ ಪ್ರಸವ ಸಮಯದಲ್ಲಿ ಉಸಿರುಗಟ್ಟುವಿಕೆಯಾದಲ್ಲಿ ಚಿಕಿತ್ಸೆ ನೀಡಲು ಅಗತ್ಯ ಉಪಕರಣ ಹಾಗೂ ಆಕ್ಸಿಜನ್ ಸೌಲಭ್ಯವನ್ನು ನೀಡಲಾಗಿರುತ್ತದೆ. ಈ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳು ಮತ್ತು ಶುಶ್ರೂಷಕರುಗಳಿಗೆ ನವಜಾತ ಶಿಶು ಸುರಕ್ಷಾ ಕಾರ್ಯಕ್ರಮದಡಿ ತರಬೇತಿಯನ್ನು ನೀಡುವುದರ ಮೂಲಕ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಸೇವೆಯನ್ನು ಒದಗಿಸಲಾಗುತಿದೆ. ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ 8,04,950 ಜೀವಂತ ಜನನಗಳಿಗೆ ಅವಶ್ಯಕ ಸೇವೆ ನೀಡಲಾಗಿರುತ್ತದೆ (ವರದಿ : HMIS).

➢ ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU): 2 ಹಂತದ ಆರೈಕೆ

ರಾಜ್ಯದಲ್ಲಿ ಪ್ರಸ್ತುತ 165 ನವಜಾತ ಶಿಶು ಸ್ಥಿರೀಕರಣ ಘಟಕಗಳು (NBSU) ಕಾರ್ಯನಿರ್ವಹಿಸುತ್ತಿವೆ. ನವಜಾತ ಶಿಶು ಸ್ಥಿರೀಕರಣ ಘಟಕಗಳನ್ನು ಸಮುದಾಯ ಆರೋಗ್ಯ ಕೇಂದ್ರ/ಎಫ್.ಆರ್.ಯು ಹಾಗೂ ತಾಲ್ಲೂಕ ಮಟ್ಟದ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾಗಿರುತ್ತದೆ. ಈ ಘಟಕಗಳಲ್ಲಿ ಜನನ ಸಮಯದಲ್ಲಿ ತೊಂದರೆಗೊಳಾಗುವ ನವಜಾತ ಶಿಶುಗಳಿಗೆ ಅಗತ್ಯ ತುರ್ತು ಚಿಕಿತ್ಸೆ ನೀಡಲಾಗುವುದು. ಇದಲ್ಲದೇ ನವಜಾತ ಶಿಶುವಿನಲ್ಲಿ ಕಂಡುಬರುವ ಜಾಂಡೀಸ್ ಕಾಯಿಲೆಗೆ ಅಗತ್ಯವಿರುವ ಫೋಟೋಥೆರಪಿ ಚಿಕಿತ್ಸೆಯನ್ನು ನೀಡಲು ಉಪಕರಣಗಳನ್ನು ಒದಗಿಸಲಾಗಿದೆ ಹಾಗೂ ನವಜಾತ ಶಿಶುಗಳಲ್ಲಿ/ ಮಕ್ಕಳಲ್ಲಿ ಕಂಡುಬರುವ ಅತಿಸಾರ ಬೇದಿ ಇತ್ಯಾದಿ ತೊಂದರೆಗಳಿಗೂ ಸಹ ಚಿಕಿತ್ಸೆಯನ್ನು ನೀಡಲಾಗುವುದು. ನವಜಾತ ಶಿಶು ಸ್ಥಿರೀಕರಣ ಘಟಕಗಳಲ್ಲಿ ಇಬ್ಬರು ತರಬೇತಿ ಹೊಂದಿದ ಶುಶ್ರೂಷಕರುಗಳನ್ನು ನಿಯೋಜಿಸಿದ್ದು ನವಜಾತ ಶಿಶುಗಳ ಆರೋಗ್ಯವನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ ಒಟ್ಟು 21805 ನವಜಾತ ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ.87.2 ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

➢ ವಿಶೇಷ ನವಜಾತ ಶಿಶು ಆರೈಕೆ ಘಟಕ (SNCU): 3 ಹಂತದ ಆರೈಕೆ

ಎಲ್ಲಾ ಜಿಲ್ಲಾ ಆಸ್ಪತ್ರೆಗಳು, ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಮತ್ತು ಆಯ್ದ ಹೆಚ್ಚಿನ ಹೆರಿಗೆಗಳಾಗುವ ತಾಲ್ಲೂಕು ಆಸ್ಪತ್ರೆಗಳಲ್ಲಿ ಒಟ್ಟು 50 SNCUಗಳು ಸ್ಥಾಪಿಸಲಾಗಿದೆ. 24×7 ಸೇವೆಗಳನ್ನು ಒದಗಿಸಲು ತರಬೇತಿ ಪಡೆದ ಮಕ್ಕಳ ತಜ್ಞರು, ವೈದ್ಯರು, ಶುಶ್ರೂಷಕರು ಮತ್ತು ಸಹಾಯಕ ಸಿಬ್ಬಂದಿಯಿಂದ SNCUಗಳನ್ನು ನಿರ್ವಹಿಸಲಾಗುತ್ತಿದೆ. 50 SNCUಗಳಲ್ಲಿ ಒಟ್ಟು 1138 ಹಾಸಿಗೆಗಳಿದ್ದು, ಏಪ್ರಿಲ್ 2023 ರಿಂದ ಮಾರ್ಚ್ 2024 ರವರೆಗೆ 80,586 ಶಿಶುಗಳಿಗೆ ಸೇವೆ ನೀಡಲಾಗಿದ್ದು, ಶೇ. 84.55% ರಷ್ಟು ಮಕ್ಕಳು ಯಶಸ್ವಿಯಾಗಿ ಗುಣಮುಖರಾಗಿರುತ್ತಾರೆ.

➢ ಕಾಂಗರೂ ಮದರ್ ಕೇರ್ ಅಂಡ್ ಲ್ಯಾಕ್ಟೇಶನ್ ಕ್ಲಿನಿಕ್ ಗಳು (KMC):

ನವಜಾತ ಶಿಶುವಿಗೆ ಬೆಂಬಲ ಆರೈಕೆಯನ್ನು ಬಲಪಡಿಸಲು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಕಾಂಗರೂ ಮದರ್ ಕೇರ್ (KMC) ward ಗಳು ಮತ್ತು ಹಾಲುಣಿಸುವ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗುತ್ತಿದೆ. SNCUಗಳೊಂದಿಗೆ 40 ಆಸ್ಪತ್ರೆಗಳಲ್ಲಿ ಕೆಎಂಸಿ ವಾರ್ಡ್‌ಗಳನ್ನು ಸ್ಥಾಪಿಸಲಾಗಿದೆ ಮತ್ತು ಕಡಿಮೆ ಜನನ ತೂಕದ ಶಿಶುಗಳ ಬದುಕುಳಿಯುವಿಕೆಯನ್ನು ಹೆಚ್ಚಿಸಲು ಆರೋಗ್ಯ ಕಾರ್ಯಕರ್ತರಿಗೆ KMC ವಿಧಾನದಲ್ಲಿ ತರಬೇತಿ ನೀಡಲಾಗಿದೆ. ಸ್ತನ್ಯಪಾನದ ಆರಂಭಿಕ ಮತ್ತು ಸಂಪೂರ್ಣ ಸ್ತನ್ಯಪಾನದ (exclusive breastfeeding)

ಉಪ ನಿರ್ದೇಶಕರು (ಶಾಯ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

ಪ್ರಮಾಣವನ್ನು ಹೆಚ್ಚಿಸಲು ಈ KMC ward ಗಳು ಸಹಾಯಕಾರಿಯಾಗಿವೆ. ಈ ಕೇಂದ್ರಗಳಲ್ಲಿ ಎಲ್ಲಾ ನವಜಾತ ಶಿಶುಗಳಿಗೆ ನವಜಾತ ಶಿಶುವಿನ ಸಮಗ್ರ ಆರೈಕೆಯನ್ನೂ ನೀಡಲಾಗುತ್ತಿದೆ.

> **ನವಜಾತ ಶಿಶುಗಳ ಆಂಬ್ಯುಲೆನ್ಸ್:**

ಹೆಚ್ಚಿನ ಚಿಕಿತ್ಸೆಗಾಗಿ ನವಜಾತ ಶಿಶುಗಳನ್ನು ಮೇಲ್ದರ್ಜೆ ಸೌಲಭ್ಯವುಳ್ಳ ಆಸ್ಪತ್ರೆಗೆ ಕರೆದೊಯ್ಯಲು ಆಂಬ್ಯುಲೆನ್ಸ್ ಸೇವೆಗಳನ್ನು ಮೈಸೂರು, ಬೆಂಗಳೂರು, ರಾಯಚೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ನವಜಾತ ಶಿಶುಗಳ ಆಂಬುಲೆನ್ಸ್ ಸೇವೆಗಳನ್ನು ಪ್ರಾರಂಭ ಮಾಡಲಾಗಿದೆ. ನವಜಾತ ಶಿಶುಗಳಿಗೆ ಪ್ರಯಾಣದ ಸಂದರ್ಭದಲ್ಲಿ ಚಿಕಿತ್ಸೆ ನೀಡಲು ವಿಶೇಷವಾಗಿ ಇನ್ಕ್ಯುಬೇಟರ್, ಟ್ರಾನ್ಸ್‌ಪೋರ್ಟ್ ವೆಂಟಿಲೇಟರ್, ಆಮ್ಲಜನಕ ಮೂಲ, ಸಿರಿಂಜ್ ಪಂಪ್, ಮಲ್ಟಿ-ಚಾನಲ್ ಮಾನಿಟರ್, ಪಲ್ಸ್ ಆಕ್ಸಿಮೀಟರ್, ಸಫ್ಫಾರ್ಕ್ಟಂಟ್ ಸೇರಿದಂತೆ ವಿಶೇಷ ಉಪಕರಣಗಳನ್ನು ಅಳವಡಿಸಲಾಗಿದೆ.

**ಲಸಿಕೆ ಸೇವೆಗಳು:** ಕರ್ನಾಟಕದಲ್ಲಿ ತಾಯಿ ಮತ್ತು ಮಗು ಆಸ್ಪತ್ರೆಗಳು ವಿವಿಧ ಲಸಿಕೆ ಸೇವೆಗಳನ್ನು ಒದಗಿಸುತ್ತವೆ. ಈ ಲಸಿಕೆ ಸೇವೆಗಳು ಮಕ್ಕಳು ಮತ್ತು ವಯಸ್ಕರಿಗೆ ವಿವಿಧ ರೀತಿಯ ಲಸಿಕೆಗಳನ್ನು ಒದಗಿಸುತ್ತವೆ.

ಕರ್ನಾಟಕದಲ್ಲಿ ಲಭ್ಯವಿರುವ ಲಸಿಕೆ ಸೇವೆಗಳೆಂದರೆ:

- ಬಿಸಿಜಿ ಲಸಿಕೆ: ಇದು ಬಿಸಿಜಿ ರೋಗದ ವಿರುದ್ಧ ರಕ್ಷಣೆ ಒದಗಿಸುತ್ತದೆ.
- ಡಿಪಿಟಿ ಲಸಿಕೆ: ಇದು ಡಿಫ್ತೀರಿಯಾ, ಪರ್ಟುಸಿಸ್ ಮತ್ತು ಟೆಟನಸ್ ರೋಗಗಳ ವಿರುದ್ಧ ರಕ್ಷಣೆ ಒದಗಿಸುತ್ತದೆ.
- ಹೆಪಟೈಟಿಸ್ ಬಿ ಲಸಿಕೆ: ಇದು ಹೆಪಟೈಟಿಸ್ ಬಿ ರೋಗದ ವಿರುದ್ಧ ರಕ್ಷಣೆ ಒದಗಿಸುತ್ತದೆ.
- ಇನ್ಫ್ಲುಯೆಂಜಾ ಲಸಿಕೆ: ಇದು ಇನ್ಫ್ಲುಯೆಂಜಾ ರೋಗದ ವಿರುದ್ಧ ರಕ್ಷಣೆ ಒದಗಿಸುತ್ತದೆ.
- ಪೋಲಿಯೋ ಲಸಿಕೆ: ಇದು ಪೋಲಿಯೋ ರೋಗದ ವಿರುದ್ಧ ರಕ್ಷಣೆ ಒದಗಿಸುತ್ತದೆ.
- ರೋಟಾವೈರಸ್ ಲಸಿಕೆ: ಇದು ರೋಟಾವೈರಸ್ ರೋಗದ ವಿರುದ್ಧ ರಕ್ಷಣೆ ಒದಗಿಸುತ್ತದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009